

# ಪಾತ್ರಕ್ಕಾಗಿ ಹೇಗಾದರೂ ಬದಲಾಗಬಲ್ಲೆ!

■ ಪದ್ಮನಾಭ ಭಟ್

ಬೆಂಗಳೂರಿನಲ್ಲಿಯೇ ಹುಟ್ಟಿ ಬೆಳೆದ ಪೃಥ್ವಿ ಅವರಿಗೆ ಚಿಕ್ಕಂದಿನಿಂದಲೂ ನಟನೆಯ ಗೀಳು ಇದ್ದೇ ಇತ್ತು. ಶಾಲೆ ಕಾಲೇಜು ದಿನಗಳಲ್ಲೆಲ್ಲ ಸ್ಕಿಟ್, ಡ್ರಾಮಾ ಅಂದರೆ ಪೃಥ್ವಿಗೊಂದು ಪಾತ್ರ ಖಾಯಂ ಆಗಿತ್ತು. ಆದರೆ ಎಂಜಿನಿಯರಿಂಗ್ ಮಾಡಲು ಯಾವತ್ತು ಕಾಲೇಜಿಗೆ ಅಡಿಯಿಟ್ಟರೋ ಅವರ ಆಸಕ್ತಿಗಳೆಲ್ಲ ಹಿನ್ನೆಲೆಗೆ ಸರಿದವು. ಓದೊಂದೇ ಗುರಿಯಾಯ್ತು. ಎಂಜಿನಿಯರಿಂಗ್ ಮುಗಿಸಿ ಒಂದು ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸವೂ ಸಿಕ್ಕಿತು.

ವಿದ್ಯೆ ಮುಗಿದು, ಕೈತುಂಬ ಸಂಬಳ ಬರುವ ಕೆಲಸ ಸಿಕ್ಕಿದ ಮೇಲೆ ಬದುಕಿನಲ್ಲಿ ಒಂದು ರೀತಿಯ ನಿರಾಳತೆ ಆವರಿಸುವುದು ಸಹಜ. ಆದರೆ ಪೃಥ್ವಿ ವಿಷಯದಲ್ಲಿ ಹಾಗಾಗಲಿಲ್ಲ. ಅವರ ಮನಸ್ಸು ಒಳಗೊಳಗೇ ಚಡಪಡಿಸುತ್ತಿತ್ತು. ಕಾಣದ ಕಡಲಿನ ಮೊರೆತದ ಜೋಗುಳಕ್ಕೆ ಕಿವಿಗೊಡುತ್ತಿತ್ತು. ಆರು ತಿಂಗಳು ಕಳೆಯುವಷ್ಟರಲ್ಲಿ ಕತ್ತಲ್ಲಿ ಜೋತುಬಿದ್ದಿದ್ದ ಕಂಪನಿಯ ಎಂಪ್ಲಾಯಿ ಐಡಿ ಉಸಿರುಗಟ್ಟಿಸತೊಡಗಿತ್ತು. ತನ್ನ ಜಾಗ ಇದಲ್ಲ, ತಾನು ಮಾಡಬೇಕಿರುವುದು ಈ ಕೆಲಸ ಅಲ್ಲವೇ ಅಲ್ಲ ಅನಿಸತೊಡಗಿತು. ಹಾಗಾದರೆ ತನ್ನ ಬದುಕು ಯಾವ ದಾರಿಯಲ್ಲಿ ಸಾಗಬೇಕು ಎಂಬ ಪ್ರಶ್ನೆಗೆ ಪೃಥ್ವಿಗೆ ಉತ್ತರ ಸಿಕ್ಕಿಯಾಗಿತ್ತು. ಬಣ್ಣದ ಲೋಕ ಕೈಬೀಸಿ ಕರೆಯುತ್ತಿತ್ತು.

ಪೃಥ್ವಿ ಮೈ ಹುರಿಗೊಳಿಸಿಕೊಂಡರು, ಸಿಕ್ಸ್ ಪ್ಯಾಕ್ ಮಾಡಿಕೊಂಡರು. ನಂತರ ಒಂದು ದಿನ ಮನೆಯಲ್ಲಿ ನನ್ನ ಕನಸು ಸಿನಿಮಾ, ಅಲ್ಲಿಯೇ ನನ್ನ ಬದುಕನ್ನು ರೂಪಿಸಿಕೊಳ್ಳುತ್ತೇನೆ ಎಂದು ಹೇಳಿಬಿಟ್ಟರು.

ಮಾಡೆಲಿಂಗ್ ಹಲಗೆಯಿಂದ ಜಿಗಿದು ಚಿತ್ರರಂಗಕ್ಕೆ ಬಂದ ಪೃಥ್ವಿ ಅವರ ಮೊದಲ ಸಿನಿಮಾದ ಚಿತ್ರೀಕರಣ ಮುಗಿದು ಬಿಡುಗಡೆಗೆ ಸಿದ್ಧವಾಗಿದೆ. ಈ ಸಿನಿಮಾದಲ್ಲಿ ಅವರು ವಿಜಯ ಸೂರ್ಯ ಅವರ ಸ್ನೇಹಿತನಾಗಿ ನಟಿಸಿದ್ದಾರೆ. ಅವರ ನಟನೆಗೆ ನಾಯಕನಿಗೆ ಸರಿಸಮಾನವಾದ ಅವಕಾಶ ಇದೆಯಂತೆ. ಫ್ರೆಂಡ್‌ಷಿಪ್ ಮಹತ್ವವನ್ನು ಸಾರುವ ಈ ಚಿತ್ರದ ನಟನೆ ತನಗೆ ಅವಕಾಶಗಳ ಹೊಸ ಬಾಗಿಲನ್ನು ತೆರೆಯುತ್ತದೆ ಎಂಬ ನಂಬಿಕೆಯಲ್ಲಿ ಅವರಿದ್ದಾರೆ.

'ಇದು ಸಾಫ್ಟ್‌ವೇರ್ ಜಗತ್ತಿನ ರಾಜಕೀಯ ಮತ್ತು ಕ್ರೌರ್ಯದ ಕುರಿತಾದ ಸಿನಿಮಾ. ನಾನಿಲ್ಲಿ ಹೈಪರ್ ಆ್ಯಕ್ಟಿವ್ ಹುಡುಗನಾಗಿ ಕಾಣಿಸಿಕೊಂಡಿದ್ದೇನೆ' ಎನ್ನುವ ಪೃಥ್ವಿ ಅಭಿನಯಕ್ಕೆ ನಾಯಕನಟ ವಿಜಯ್ ಸೂರ್ಯ ಕೂಡ ತಲೆದೂಗಿದ್ದಾರಂತೆ.

ಮೊದಲ ಸಿನಿಮಾ ಬಿಡುಗಡೆಯಾಗುವ ಮುನ್ನವೇ ಪೃಥ್ವಿಗೆ ಇನ್ನೊಂದು ಸಿನಿಮಾದಲ್ಲಿ ನಟಿಸುವ ಅವಕಾಶ ಬಂದಿದೆ. ಶಶಿಕುಮಾರ್ ಮಗ ಅಕ್ಷಿತ್ ನಾಯಕನಾಗಿ ನಟಿಸುತ್ತಿರುವ 'ಓ ಮೈ ಲವ್' ಸಿನಿಮಾದಲ್ಲಿಯೂ ಇವರು ನಾಯಕ ಸ್ನೇಹಿತನಾಗಿ ನಟಿಸುತ್ತಿದ್ದಾರೆ. ಹಾಗೆಂದು ಎರಡೂ ಪಾತ್ರಗಳೂ ಒಂದೇ ರೀತಿಯಾಗಿಲ್ಲ. ಮೊದಲನೇ ಸಿನಿಮಾದಲ್ಲಿ ಕೂಲ್ ಆಗಿರುವ, ಸದಾ ಜೀವನೋತ್ಸಾಹದ ಚಿಲುಮೆಯಂತಿರುವ ಪಾತ್ರದಲ್ಲಿ ನಟಿಸಿದರೆ 'ಓ ಮೈ ಲವ್' ಸಿನಿಮಾದಲ್ಲಿ ಶಾರ್ಟ್ ಟೆಂಪರ್ ಹುಡುಗನಾಗಿ ನಟಿಸಿದ್ದಾರೆ.

'ನಾನು ನಟಿಸಿರುವ ಎರಡೂ ಪಾತ್ರಗಳು ಒಂದಕ್ಕಿಂತ ಇನ್ನೊಂದು ತುಂಬ ಭಿನ್ನವಾಗಿದೆ. ಹೀಗೆ ವೈವಿಧ್ಯದ ಪಾತ್ರದ ಮೂಲಕವೇ ನನ್ನನ್ನು ನಾನು ಗುರ್ತಿಸಿಕೊಳ್ಳಬೇಕು. ಜನರು ನನ್ನನ್ನು ಪೃಥ್ವಿ ಎಂದು ಗುರ್ತಿಸುವುದಕ್ಕಿಂತ ನಾನು ನಟಿಸಿದ ಪಾತ್ರದ ಹೆಸರು ಹೇಳಿ ಗುರ್ತಿಸಬೇಕು ಎಂದು ನಾನು ಬಯಸುತ್ತೇನೆ' ಎನ್ನುತ್ತಾರೆ ಅವರು.

ಎರಡನೇ ಸಿನಿಮಾ ಮುಗಿಯುವ ಮೊದಲೇ ಅವರಿಗೆ ಇನ್ನೊಂದು ಸಿನಿಮಾದ ಅವಕಾಶ ಬಂದಿದೆ. 'ಓ ಮೈ ಲವ್' ಸಿನಿಮಾದಲ್ಲಿ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದವರೊಬ್ಬರು ತಮ್ಮ ಮುಂದಿನ ಸಿನಿಮಾಗೆ ನೀವೇ ಹೀರೊ ಎಂದು ಹೇಳಿಬಿಟ್ಟಿದ್ದಾರಂತೆ.

'ಸಿನಿಮಾ ಪಾತ್ರಕ್ಕಾಗಿ ಲುಕ್, ಬಾಡಿ, ಹೇರ್ ಸ್ಟೈಲ್ ಏನು ಬೇಕಾದರೂ ಬದಲಿಸಿಕೊಳ್ಳಲು ಸಿದ್ಧ' ಎನ್ನುವ ಅವರಿಗೆ ಕಮಲ್‌ಹಾಸನ್ ರೋಲ್ ಮಾಡಲ್. ಅವರ ಪ್ರತಿಭೆಯ ನೂರರಲ್ಲಿ ಹತ್ತರಷ್ಟು ನನಗೆ ನಟಿಸಲು ಸಾಧ್ಯವಾದರೆ ಅದೇ ದೊಡ್ಡದು ಎನ್ನುವ ಅವರು ಇನ್ನಷ್ಟು ಅವಕಾಶಗಳಿಗಾಗಿ ಎದುರು ನೋಡುತ್ತಿದ್ದಾರೆ. ■